# ಮಾದರಿ ಪ್ರಶ್ನೆಪತ್ರಿಕೆ ೪

## ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ

## ಗರಿಷ್ಠ ಅಂಕ: ೧೦೦ ಅವಧಿ : ೨.೪೫ ಗಂಟೆಗಳು

### ಭಾಗ -'ಎ'

**ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧**

೧ . ಧರ್ಮಗಳು ಹಾಕಿಕೊಟ್ಟಿರುವ ರತ್ನಪಾತ ಏನು ?

೨. ಶ್ರೀರಾಮನ ತಂದೆಯ ಹೆಸರೇನು ?

೩. ಶಬರಿ ಯಾರ ಆಶ್ರಮದಲ್ಲಿ ವಾಸವಾಗಿದ್ದಳು ?

೪. ಶಾನುಭೋಗರಿಗೆ ತಲೆಸುತ್ತಲು ಕಾರಣವೇನು ?

೫. ಶಾನುಭೋಗರ ವದನಾರವಿಂದದಲ್ಲಿ ಮುಗುಳು ನಗು ಮೂಡಲು ಕಾರಣವೇನು ?

೬. ಲಾವಣಿಗಳನ್ನು ಏನೆಂದು ಕರೆಯಲಾಗಿದೆ ?

೭. ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಹೇಗೆ ಮುನ್ನಡೆಸಬೇಕು ?

೮. ಯಾರಿಂದ ಕಲವುಂಟಾಯ್ತು ಎಂದು ಧೃತರಾಷ್ಟ್ರನು ಹೇಳಿದನು ?

೯. ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ ?

೧೦. ಸ್ವಾತಂತ್ರ್ಯದ ಎರಡು ಬಗೆಗಳು ಯಾವುವು ?

೧೧. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?

**ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨ =೧೮**

೧೨. ಶಬರಿಯ ಮೋಕ್ಷದ ಹಂಬಲವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ .

೧೩. ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು ?

೧೪. ಖಾದಿಬಟ್ಟೆಯ ಕುರಿತು ಗೊರೂರರು ಅಮೆರಿಕದ ವಿದ್ಯಾರ್ಥಿಗಳಿಗೆ ಏನು ಹೇಳಿದರು ?

೧೫..ಪ್ರೇಮಮತಿಯು ದುಷ್ಟಬುದ್ಧಿಗೆ ಹೇಗೆ ಬುದ್ಧಿವಾದ ಹೇಳಿದನು ? ಏಕೆ ?

೧೬. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

೧೭. ಕರ್ಣನನ್ನು ಹಸ್ತಿನಾಪುರದ ರಾಜನಾಗಿಸುವ ಕುರಿತು ಶ್ರೀಕೃಷ್ಣನು ಹೇಳಿದ ಮಾತುಗಳೇನು?

mamatabhagwat1@gmail.com

೧೮. ಕರ್ಣನಿಗೆ ದುರ್ಯೋಧನನ ಮೇಲಿರುವ ಅಭಿಮಾನ , ಸ್ವಾಮಿನಿಷ್ಠೆ ಅವನ ಮಾತುಗಳಲ್ಲಿ ಹೇಗೆ ವ್ಯಕ್ತವಾಗಿದೆ ?

೧೯. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?

೨೦. ಅಂಗಿಯ ಕುರಿತಾಗಿರುವ ಜನಪದ ಒಗಟನ್ನು ವಿವರಿಸಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨**

೨೧. ''ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು''

೨೨. ''ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವ ನಟ್ಟು ಪಾಲಿಸುವರು''

೨೩. ''ಪಗಲೆನಿತಾನುಂ ದೀವಿಗೆಗಳುರಿದೊಡೇಂ ''

೨೪. ''ಗಡಿಯ ಮ್ಯಾಜಿಕ್ ನಿಂದ ಜೀವತೆತ್ತವರು''

**ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬**

೨೫. ದೇವನೂರು ಮಹಾದೇವ

೨೬. ಜಿ.ಎಸ್ .ಶಿವರುದ್ರಪ್ಪ

**೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ೧*೪=೪**

ನೀಲಮೇಘ ----------------

----------------------------

---------------------------

-------------------------------

------------------- ನೋಡಿದಿರಾ

ಅಥವಾ

ಯುಗಯುಗಗಳ ---------

---------------------

-----------------------

----------- ----------

----------------- ನೋಡಿದಿರಾ

**೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪*೧=೪**

ಅಂದಣವನೇರಿದ ಸೊಣಗನಂತೆ

mamatabhagwat1@gmail.com

ಕಂಡೊಡೆ ಬಿಡದು ಮುನ್ನಿನ ಸ್ವಭಾವವನು
ಸುಡು!ಸುಡು!! ಮನವಿದು ವಿಷಯಕ್ಕೆ ಹರಿವುದು ;
ಮೃಡ , ನಿಮ್ಮನನುದಿನ ನೆನೆಯಲೀಯದು
ಎನ್ನೊಡೆಯ ಕೂಡಲ ಸಂಗಮದೇವಾ
ನಿಮ್ಮ ಚರಣವ ನೆನೆವಂತೆ ಕರುಣಿಸು
ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ

ಪ್ರಶ್ನೆಗಳು :

೧. ಮನಸ್ಸಿನ ಸ್ವಭಾವವನ್ನು ಬಸವಣ್ಣನವರು ಯಾವುದಕ್ಕೆ ಹೋಲಿಸಿದ್ದಾರೆ ?
೨.ದೇವರನ್ನು ಅನುದಿನವೂ ಯಾವುದು ನೆನೆಯಲು ಬಿಡುವುದಿಲ್ಲ ?
೩. ಬಸವಣ್ಣನವರು ಕೂಡಲಸಂಗಮನಲ್ಲಿ ಏನನ್ನು ಕರುಣಿಸುವಂತೆ ಕೋರಿದ್ದಾರೆ ?
೪. ಈ ನುಡಿಯಿಂದ ನೀವೇನು ಅರಿಯುವಿರಿ ?

## ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೯.ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ತಿಳಿಸಿ.

ಅಥವಾ

ಶಾನುಭೋಗರನ್ನು ರಕ್ಷಿಸಿದುದು ಖಿರ್ದಿಪುಸ್ತಕವೇ ಅಥವಾ ಹುಲಿಯ ಧರ್ಮವೇ ? ಸಮರ್ಥನೆಯೊಂದಿಗೆ ವಿವರಿಸಿ.

೩೦. ವಾಲ್ಮೀಕಿಯ ಆಶ್ರಮಕ್ಕೆ ರಾಮನ ಅಶ್ವಮೇಧದದ ಕುದುರೆಯು ಬಂದ ಸಂದರ್ಭವನ್ನು ವಿವರಿಸಿ .

ಅಥವಾ

ಅಶ್ವಮೇಧದ ಕುದುರೆಯ ಹಣೆಪಟ್ಟಿಯ ಮೇಲಿದ್ದ ಬರಹವನ್ನು ನೋಡಿ ಲವನ ಮನದಲ್ಲಿ ಮೂಡಿದ ಭಾವನೆಯನ್ನು ಮತ್ತು ಅವನ ಪ್ರತಿಕ್ರಿಯೆಯನ್ನು ವಿವರಿಸಿ

## ೩೧. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

''ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು '' ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ

ಆದ್ಯತೆ ನೀಡಿದರು. ಇದಕ್ಕಾಗಿಯೇ ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜನಿಯರಿಂಗ್ ಶಾಲೆ ,ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಮಹಿಳಾಶಿಕ್ಷಣದ ಬಗ್ಗೆ ಸಹಾನುಭೂತಿ ಹೊಂದಿದ್ದ ಇವರು ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು.ವಿದ್ಯಾರ್ಥಿವೇತನವನ್ನು ಕೊಡುವುದರ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು.ಇದಲ್ಲದೆ ಭಾಷೆ , ಸಾಹಿತ್ಯ ಮತ್ತು ಸಂಶೋಧನೆಗಳಿಗೂ ಪ್ರೋತ್ಸಾಹ ನೀಡಿದರು. ಓದುವ ಹವ್ಯಾಸ ಬೆಳೆಸುವ ದೃಷ್ಟಿಯಿಂದ ಗ್ರಂಥಾಲಯಗಳ ವ್ಯವಸ್ಥೆಗೆ ಅಸ್ತಿಭಾರ ಹಾಕಿದರು.ಏಕೀಕೃತ ಕರ್ನಾಟಕದ ರಚನೆ ಮತ್ತು ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಉಂಟಾಗಿದ್ದ ಒಲವನ್ನು ಮನಗಂಡು 'ಕನ್ನಡ ಸಾಹಿತ್ಯ ಪರಿಷತ್ತನ್ನು'ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆ .

ಪ್ರಶ್ನೆಗಳು :

೧.ಶಿಕ್ಷಣದ ಕುರಿತು ವಿಶ್ವೇಶ್ವರಯ್ಯನವರ ಹೇಳಿಕೆಯನ್ನು ಅದಕ್ಕಾಗಿ ಅವರು ಕೈಗೊಂಡ ಕ್ರಮಗಳನ್ನು ತಿಳಿಸಿ

೨.ಭಾಷೆ ,ಸಾಹಿತ್ಯದ ಉಳಿವಿಗಾಗಿ ವಿಶ್ವೇಶ್ವರಯ್ಯನವರು ಏನು ಮಾಡಿದರು ?

ಭಾಗ – 'ಬಿ'

ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು-೨೦ ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ ೧೦*೧=೧೦**

೩.೨. ರಾಮಲಕ್ಷ್ಮಣರು ಎನ್ನುವ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ -----

ಎ)ದ್ವಿಗು ಸಮಾಸ ಬಿ)ದ್ವಂದ್ವಸಮಾಸ ಸಿ)ಕ್ರಿಯಾಸಮಾಸ ಡಿ)ಅಂಶಿಸಮಾಸ

೩.೩. 'ರಕ್ಷೆಯಿಡಲಿ' ಪದವು ಈ ಕ್ರಿಯಾಪದ ರೂಪಕ್ಕೆ ಉದಾಹರಣೆಯಾಗಿದೆ -------

ಎ) ವಿಧ್ಯರ್ಥಕ ಬಿ)ಸಂಭಾವನಾರ್ಥಕ ಸಿ)ನಿಷೇಧಾರ್ಥಕ ಡಿ )ಸಂಯೋಜನಾತ್ಮಕ

೩.೪. ಕೆಳಗೆ ಕೊಟ್ಟಿರುವ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರವನ್ನು ಹೊಂದಿರುವ ಪದ -----

ಎ)ತಮ್ಮ ಬಿ)ಅನ್ನ ಸಿ)ಮೆಚ್ಚು ಡಿ)ಸದ್ಗುಣ

೩.೫. 'ಭಕ್ತರ ದೆಸೆಯಿಂದ' ಈ ಪದದಲ್ಲಿರುವ ವಿಭಕ್ತಿ -------

ಎ)ಪ್ರಥಮಾ ಬಿ)ದ್ವಿತೀಯಾ ಸಿ)ಪಂಚಮಿ ಡಿ) ತೃತೀಯಾ

೩೬. ಮನೆಮನೆ ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ)ದ್ವಿರುಕ್ತಿ ಬಿ)ಅನುಕರಣಾವ್ಯಯ ಸಿ)ನುಡಿಗಟ್ಟು ಡಿ)ಜೋಡುನುಡಿ

೩೭. ಪ್ರಸಾದ ಪದದ ತದ್ಭವ ರೂಪವಿದು ------

ಎ) ಪರಸಾದ ಬಿ)ಹಸಾದ ಸಿ)ಪ್ರಸೀದ ಡಿ)ಪ್ರಸಿದ್ಧ

೩೮. ಪಾಂಡು ರಾಜನ ಎರಡನೆಯ ಹೆಂಡತಿಯ ಹೆಸರು ಮಾದ್ರಿ ಎಂದಾಗಿತ್ತು ಈ ವಾಕ್ಯದಲ್ಲಿ ಸಂಖ್ಯೇಯವಾಚಕ ಪದ ---------

ಎ)ರಾಜನ ಬಿ)ಹೆಂಡತಿ ಸಿ)ಹೆಸರು ಡಿ)ಎರಡನೆಯ

೩೯. ಇಲ್ಲಧ್ಹಂಗ ಪದದ ಗ್ರಾಂಥಿಕ ರೂಪವಿದು -----

ಎ) ಇಲ್ಲದ ಹಾಗೆ ಬಿ)ಇಲ್ಲದಾಗ ಸಿ)ಇಲ್ಲದಾಗಿ ಡಿ)ಇಲ್ಲದೇ ಹೀಂಗ

೪೦. ಈ ಸಮಷ್ಟಿಮನಸ್ಸಲ್ಲಿ ಎಲ್ಲರೂ ಇರುತ್ತಾರೆ ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ—----

ಎ) ಪೂರ್ಣ ವಿರಾಮ ಬಿ) ಅಲ್ಪವಿರಾಮ ಸಿ)ಅರ್ಧವಿರಾಮ ಡಿ )ವಾಕ್ಯವೇಷ್ಠನ

೪೧. 'ಕಾಗದ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ --------

ಎ)ಅರಬ್ಬೀ ಬಿ)ಫಾರ್ಸಿ ಸಿ)ಉರ್ದು ಡಿ)ಹಿಂದೂಸ್ಥಾನಿ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆಯಿರಿ.೪*೧=೪**

೪೨. ಸಿರಿವಂತ : ತದ್ಧಿತಾಂತ ನಾಮ : : ಸಿರಿವಂತಿಕೆ : _____

೪೩. ಪೂಜಾರಿ : ಅನ್ವರ್ಥಕ ನಾಮ : : ಪೂಜೆ : ----

೪೪. ಮಹಾತ್ಮ : ಸವರ್ಣ ದೀರ್ಘಸಂಧಿ : : ಜಾತ್ಯಾತೀತ : ____

೪೫.ಎದೆ ನಡುಗು : ನುಡಿಗಟ್ಟು: : ದುಃಖದುಮ್ಮಾನ : -----

**೪೬. ಈ ಕೆಳಗಿನ ಪದ್ಯಭಾಗಕ್ಕೆಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩**

ಉರ್ವಿಯೊಳ್ ಕೌಸಲ್ಯೆಪಡೆದ ಕುವರಂ ರಾಮ
ನೋರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ |

ಅಥವಾ

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿಮುನಿನಾಥನೇ
ಪೊತ್ತುಮಾರ್ೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ |

೪೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ.೧*೩
'ಚರಣಾಂಬುಜ'
ಅಥವಾ
'ರಸವೇ ಜೀವನ'

ಭಾಗ -'ಸಿ'
ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.
೧*೩=೩
೧. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ
೨. ಹಾಸಿಗೆ ಇದ್ದಷ್ಟು ಕಾಲು ಚಾಚು
೩. ತಾಯಿಗಿಂತ ಬಂಧುವಿಲ್ಲ ;ಉಪ್ಪಿಗಿಂತ ರುಚಿಯಿಲ್ಲ
ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯ ವರದಿಯನ್ನು ಪ್ರಕಟಿಸುವಂತೆ ಕೋರಿ ಕನ್ನಡಪ್ರಭ ದಿನಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರೆಯಿರಿ.
ಅಥವಾ
ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಅನುಮತಿ ಕೋರಿ ಧಾರವಾಡದಲ್ಲಿರುವ ನಿಮ್ಮ ತಂದೆಗೆ ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫
೧. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

೨. ಕುಡಿತದ ಕೆಡುಕು

೩.ಶಿಕ್ಷಣದಲ್ಲಿ ತಂತ್ರಜ್ಞಾನ

mamatabhagwat1@gmail.com